# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.

## ಎಸ್.ಸಿ. ನಂಃ 128/2019

**ಫಿರ್ಯಾದುದಾರರುಃ ಕರ್ನಾಟಕ ರಾಜ್ಯದ ಪರವಾಗಿ (ಚಿಂತಾಮಣಿ ನಗರ ಪೋಲಿಸರು)**

**ವಿರುದ್ಧ**

**ಆರೋಪಿತರುಃ ಲೋಕೇಶ್ ಮತ್ತು ಇತರರು**

| | | | |
|---|---|---|---|
| **ಸಾಕ್ಷಿದಾರರ ಹೆಸರುಃ** | ಶಿವಾರೆಡ್ಡಿ | ಪ್ರಾಸಾಃ | 14 |
| **ತಂದೆಯ ಹೆಸರುಃ** | ನಾರಾಯಣಸ್ವಾಮಿ | ಚಾಸಾಃ | 21 |
| **ವಯಸ್ಸುಃ** | 42 ವರ್ಷ | ಪ್ರಮಾಣ ವಚನ ಭೋದಿಸಿದ ದಿನಾಂಕ | 24.07.2024 |
| **ಉದ್ಯೋಗಃ** | ವ್ಯವಸಾಯ | | |
| **ವಾಸ ಸ್ಥಳಃ** | ಧನಮಿಟ್ಟೇನಹಳ್ಳಿ ಗ್ರಾಮ, ಚಿಂತಾಮಣಿ ತಾಲ್ಲೂಕು. | | |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ಸುಮಾರು 4-5 ವರ್ಷಗಳ ಹಿಂದೆ ಪ್ರಸಾದದಲ್ಲಿ ವಿಷ ಹಾಕಿದ್ದಾರೆ ಎನ್ನುವ ವಿಷಯ ನನಗೆ ಗೊತ್ತಾಯಿತು, ಆದರೆ ಯಾರು ಮತ್ತು ಎಲ್ಲಿ ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ. ಈಗ ತೋರಿಸಿದ ದಾಖಲೆಗಳಲ್ಲಿರುವ ತನ್ನ ಸಹಿಗಳನ್ನು ಸಾಕ್ಷಿ ಗುರುತಿಸಿರುತ್ತಾರೆ. ದಿನಾಂಕಃ29.01.2019 ರಂದು ಸಾಲಿಪೇಟೆಯಲ್ಲಿರುವ ಗಂಗಮ್ಮನ ದೇವಸ್ಥಾನದ ಬಳಿ ಕೃತ್ಯ ನಡೆದ ಸ್ಥಳದಲ್ಲಿ ನಡೆಸಿದ ಪಂಚನಾಮೆ ಆಗಿರುತ್ತದೆ. ಸದರಿ ದಾಖಲೆಗೆ ನಾನು ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಸದರಿ ದಾಖಲೆಯನ್ನು ನಿ.ಪಿ.8 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.8(ಎ) ಎಂದು ಗುರುತಿಸಲಾಯಿತು.

ಮುಂದುವರೆದ ಪಂಚನಾಮೆಗೂ ಸಹ ಚಿಂತಾಮಣಿ ನಗರ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಮುಂದುವರೆದ ಪಂಚನಾಮೆಯನ್ನು ಪರಿಶೀಲಿಸಲಾಗಿ ಆರೋಪಿ ಲಕ್ಷ್ಮೀ ಪೋಲಿಸರನ್ನು ಮತ್ತು ಪಂಚರನ್ನು ಕರೆದುಕೊಂಡು ಹೋಗಿ 1 ನೇ ಅಂಗಡಿಯೊಳಗಡೆ ಇಟ್ಟಿದ್ದ ಸಣ್ಣ ಪ್ಲಾಸ್ಟಿಕ್ ಡಬ್ಬವನ್ನು ಹಾಜರ್ ಪಡಿಸಿದ, ಅದರಲ್ಲಿನ ಬಿಳಿ ಬಣ್ಣದ ಪೌಡರ್ ನ್ನು ತೋರಿಸಿ ಸದರಿ ಪೌಡರ್ ನ್ನು ಬಂಗಾರದ ಆಭರಣಗಳನ್ನು ತಯಾರಿಸಲು ಉಪಯೋಗಿಸಲಾಗುತ್ತದೆ ಮತ್ತು ಸದರಿ ಬಿಳಿ ಬಣ್ಣದ ಪೌಡರ್ ನ್ನು ಸ್ಟೀಲ್ ಪಾತ್ರೆಯಲ್ಲಿ ರವೆ ಮತ್ತು ಸಕ್ಕರೆಯಿಂದ ರವೆ ಪ್ರಸಾದವನ್ನು ತಯಾರಿಸಿ ಸ್ಟೀಲ್ ಕ್ಯಾರಿಯರ್ ಗೆ ಹಾಕಿ ಸ್ವಲ್ಪ ಪ್ರಸಾದವನ್ನು ಒಂದು ಚಿಕ್ಕ ಸ್ಟೀಲ್ ಟಿಪನ್ ಬಾಕ್ಸ್ ಗೆ ಹಾಕಿ ಸದರಿ ಪ್ರಸಾದದೊಂದಿಗೆ ಬಿಳಿಯ ಬಣ್ಣದ ಪೌಡರ್ ನ್ನು ಬೆರೆಸಿ ನೀಡಲಾಗಿತ್ತು ಎಂದು ತೋರಿಸಿದ ಜಾಗದಲ್ಲಿ ಪಂಚನಾಮೆಯನ್ನು ಜರುಗಿಸಲಾಗಿರುತ್ತದೆ, ಆದರೆ ಸಾಕ್ಷಿಯ ಪ್ರಕಾರ ಸದರಿ ಪಂಚನಾಮೆಯನ್ನು ನಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆಂದು ತಿಳಿಸಿರುತ್ತಾರೆ. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ಸಾಕ್ಷಿ ಗುರುತಿಸಿದ್ದು, ಅದನ್ನು ನಿ.ಪಿ.8(ಬಿ) ಎಂದು ಗುರುತಿಸಲಾಯಿತು. ಮುಂದುವರೆದು ಪಂಚನಾಮೆಯನ್ನು ಪರಿಶೀಲಿಸಲಾಗಿ ಆರೋಪಿ ಅಮರಾವತಿರವರು ಪ್ರಸಾದವನ್ನು ಹಂಚಿಕೆ ಮಾಡಿದ ಸ್ಟೀಲ್ ಕ್ಯಾನ್ ಮತ್ತು ಸ್ಟೀಲ್ ಟಿಪನ್ ನ ಬಗ್ಗೆ ಕೇಳಿದ್ದು, ಅದನ್ನು ಆಕೆ ವಾಸದ ಮನೆಯ ಬಳಿ ಕರೆದುಕೊಂಡು ಹೋಗಿ ಮನೆಯಲ್ಲಿ ಅಡುಗೆ ಕೋಣೆಯಲ್ಲಿ ಇಟ್ಟಿರುವುದನ್ನು ತೆಗೆದುಕೊಟ್ಟಿದ್ದು, ಅದರಲ್ಲಿ ಇಟ್ಟಿದ್ದ

ಸ್ಟೀಲ್ ಟಿಪನ್ ಬಾಕ್ಸ್ ಅದರ ಪಕ್ಕದಲ್ಲಿ ಇಟ್ಟಿದ್ದ ಬಿಳಿ ಬಣ್ಣದ ಪೇಪರ್ ಲೋಟಗಳನ್ನು ತೋರಿಸಿ ಹಾಜರ್ ಪಡಿಸಿದ ಬಗ್ಗೆ ನಡೆಸಿದ ಪಂಚನಾಮೆ ಆಗಿರುತ್ತದೆ. ಆದರೆ ಸಾಕ್ಷಿಯ ಪ್ರಕಾರ ಸದರಿ ಪಂಚನಾಮೆಗೆ ಚಿಂತಾಮಣಿ ನಗರ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆಂದು ತಿಳಿಸಿರುತ್ತಾರೆ. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.8(ಸಿ) ಎಂದು ಗುರುತಿಸಲಾಯಿತು. ಪೋಲಿಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತುಪಡಿಸಿಕೊಂಡಿರುವುದಿಲ್ಲ.

2) ನ್ಯಾಯಾಲಯದ ಮುಂದೆ ಇರುವ ವಸ್ತುಗಳು ಸೀಲ್ ಆಗಿದ್ದು, ಮಾನ್ಯ ಪಿ.ಪಿ.ರವರು ಅವುಗಳ ಸೀಲ್ ನ್ನು ಹೊಡೆದು, ಚೀಲವನ್ನು ಬಿಚ್ಚಿ ಅದರಲ್ಲಿರುವ ಒಂದು ಚಿಕ್ಕ ಪ್ಲಾಸ್ಟಿಕ್ ಬಾಕ್ಸ್, ಒಂದು ಬಿಳಿ ಬಣ್ಣದ ಪೌಡರ್, ಒಂದು ಸ್ಟೀಲ್ ಟಿಪನ್ ಬಾಕ್ಸ್, ಒಂದು ಸ್ಟೀಕ್ ಕ್ಯಾರಿಯರ್ ಬಾಕ್ಸ್ ಮತ್ತು ಬಿಳಿ ಬಣ್ಣದ 51 ಪೇಪರ್ ಕಪ್ಸ್ ಗಳನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ಸದರಿ ವಸ್ತುಗಳನ್ನು ನೋಡಿ ನಾನು ಈ ಹಿಂದೆ ನೋಡಿರುವುದಿಲ್ಲವೆಂದು ತಿಳಿಸಿರುತ್ತಾರೆ. ಆದರೆ ಸಾಕ್ಷಿಯು ಬಿಳಿ ಬಟ್ಟೆ ಚೀಲದ ಮೇಲೆ ಚೀಟಿ ಅಂಟಿಸಿದ್ದು, ಅದರ ಮೇಲೆ ತನ್ನ ಸಹಿ ಇರುತ್ತದೆ ಎಂದು ತಿಳಿಸಿರುತ್ತಾರೆ. ಸದರಿ ಚೀಟಿಗಳ ಮೇಲೆ ಸಹಿಗಳನ್ನು ಪೋಲಿಸ್ ಠಾಣೆಯಲ್ಲಿ ಮಾಡಿರುತ್ತೇನೆ. ನಿ.ಪಿ.8 ನ್ನು ಯಾರು ಬರೆದರು ಮತ್ತು ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು**

**ಮಾಡಲು ಅಭಿಯೋಜಕರು ಅನುಮತಿ ಕೇಳಿದ್ದಾರೆ. ಅನುಮತಿ ನೀಡಲಾಗಿದೆ)**

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

3) ದಿನಾಂಕಃ29.01.2019 ರಂದು ಚಿಂತಾಮಣಿ ನಗರದ ಸಾಲೀ ಪೇಟೆಯಲ್ಲಿರುವ ಗಂಗಮ್ಮ ದೇವಸ್ಥಾನದ ಬಳಿ ಪೋಲಿಸರು ಬಂದಿದ್ದು, ಅಲ್ಲಿ ಪೋಲಿಸರು ನನ್ನ ಮತ್ತು ಲಕ್ಷ್ಮೀನಾರಾಯಣಪ್ಪರವರ ಸಮಕ್ಷಮ ಮಧ್ಯಾಹ್ನ 2.00 ರಿಂದ 2.20 ಗಂಟೆವರೆಗೂ ಕೃತ್ಯ ನಡೆದ ಸ್ಥಳದ ಪಂಚನಾಮೆ ಜರುಗಿಸಿರುತ್ತಾರೆಂದರೆ ಸರಿಯಲ್ಲ. ನಾನು ಸ್ಥಳದಲ್ಲಿ ಹಾಜರಿದ್ದು ಸದರಿ ಪಂಚನಾಮೆಯಲ್ಲಿರುವ ಎಲ್ಲಾ ವಿಚಾರವನ್ನು ತಿಳಿದುಕೊಂಡು ಸದರಿ ದಾಖಲೆಗೆ ಸಹಿ ಮಾಡಿರುತ್ತೇನೆಂದರೆ ಸರಿಯಲ್ಲ. ನಂತರ ಅದೇ ದಿನ ಮುಂದುವರೆದು ಆರೋಪಿ ಲಕ್ಷ್ಮೀರವರು ರವೆ ಪ್ರಸಾದದೊಂದಿಗೆ ವಿಷ ಬೆರೆಸಿದ ಸ್ಥಳವಾದ ಆರೋಪಿ ಬಂಗಾರದ ಅಂಗಡಿ ಮತ್ತು ವಾಸದ ಮನೆಯ ಬಳಿ ಪೋಲಿಸರು ನನ್ನ ಮತ್ತು ಲಕ್ಷ್ಮೀನಾರಾಯಪ್ಪರವರ ಸಮಕ್ಷಮ ಮಧ್ಯಾಹ್ನ 2.25 ರಿಂದ 2.45 ಗಂಟೆವರೆಗೂ ಪಂಚನಾಮೆ ಜರುಗಿಸಿ, ಬಿಳಿ ಪೌಡರ್ ಇದ್ದ ಪ್ಲಾಸ್ಟಿಕ್ ಡಬ್ಬ ವನ್ನು ಅಮಾನತುಪಡಿಸಿಕೊಂಡರು ಎಂದರೆ ಸರಿಯಲ್ಲ. ನಾನು ಸ್ಥಳದಲ್ಲಿ ಹಾಜರಿದ್ದು ಸದರಿ ಪಂಚನಾಮೆಯಲ್ಲಿರುವ ಎಲ್ಲಾ ವಿಚಾರವನ್ನು ತಿಳಿದುಕೊಂಡು ಸದರಿ ದಾಖಲೆಗೆ ಸಹಿ ಮಾಡಿರುತ್ತೇನೆಂದರೆ ಸರಿಯಲ್ಲ. ನಂತರ ಅದೇ ದಿನ ಮುಂದುವರೆದು ಆರೋಪಿ ಅಮರಾವತಿರವರು ಪ್ರಸಾದವನ್ನು ಹಂಚಿಕೆ ಮಾಡಿದ ಸ್ಟೀಲ್ ಕ್ಯಾನ್ ಮತ್ತು ಸ್ಟೀಲ್ ಟಿಪನ್ ಬಾಕ್ಸ್ ನ್ನು ಸಾಲಿಪೇಟೆಯಲ್ಲಿರುವ ಆರೋಪಿ ಅಮರಾವತಿ ಮನೆಯ ವಾಸದ ಮನೆಯ

ಬಳಿ ಪೋಲಿಸರು ನನ್ನ ಮತ್ತು ಲಕ್ಷ್ಮೀನಾರಾಯಣಪ್ಪರವರ ಸಮಕ್ಷಮ ಮಧ್ಯಾಹ್ನ 3.00 ರಿಂದ 3.30 ಗಂಟೆವರೆಗೂ ಪಂಚನಾಮೆಯನ್ನು ಜರುಗಿಸಿ, ಅಲ್ಲಿ ಪೋಲಿಸರು ಒಂದು ಸ್ಟೀಲ್ ಕ್ಯಾನ್, ಒಂದು ಸ್ಟೀಲ್ ಬಾಕ್ಸ್, ಬಿಳಿ ಬಣ್ಣದ 51 ಪೇಪರ್ ಲೋಟಗಳನ್ನು ಅಮಾನತುಪಡಿಸಿಕೊಂಡಿರುತ್ತಾರೆಂದರೆ ಸರಿಯಲ್ಲ. ನಾನು ಸ್ಥಳದಲ್ಲಿ ಹಾಜರಿದ್ದು ಸದರಿ ಪಂಚನಾಮೆಯಲ್ಲಿರುವ ಎಲ್ಲಾ ವಿಚಾರವನ್ನು ತಿಳಿದುಕೊಂಡು ಸದರಿ ದಾಖಲೆಗೆ ಸಹಿ ಮಾಡಿರುತ್ತೇನೆಂದರೆ ಸರಿಯಲ್ಲ.

4) ಎಲ್ಲ ವಿಚಾರಗಳು ಗೊತ್ತಿದ್ದರೂ, ಪೋಲಿಸರು ನನ್ನ ಸಮಕ್ಷಮ ಮಹಜರ್ ಮಾಡಿದ್ದರೂ ಸಹ ಈಗ 2 ಮತ್ತು 3 ನೇ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲವೆಂದು ತಿಳಿಸಿರುತ್ತಾರೆ.**

**ಮರು ವಿಚಾರಣೆಃ ..... ಇಲ್ಲ .....**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು) ಓ.ಹೇ.ಕೇ. ಸರಿ ಇದೆ.

ದಿಃ24.07.2024 **(ನಾಗವೇಣಿ)**
ಸ್ಥಳಃ ಚಿಂತಾಮಣಿ ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.